**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ29-09-2025**

**ಪಾಟೀ ಸವಾಲುಃ ಆರೋಪಿ ಪರ ಕುಮಾರಿ ಪಿ ಕೆ ವಕೀಲರಿಂದಃ**

ನಾನು ದ್ವಿತಿಯ ಪಿ ಯು ಸಿ ಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಫಾಸ್ಟ್ ಪುಡ್ ವ್ಯಾಪಾರ ಮಾಡುತ್ತಿದ್ದೇನೆ. ಆರೋಪಿ ನನಗೆ 2018 ರಿಂದ ಪರಿಚಯವಿರುತ್ತಾರೆ. ಆರೋಪಿ ಜಾನೆಕೆರೆ ಗ್ರಾಮದವರು ಇರುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನಾನು ಬೇರೆ ಯಾರಿಗೂ ಸಾಲ ನೀಡಿರುವುದಿಲ್ಲ. ಆರೋಪಿಯ ಗಂಡನ ಹೆಸರು ಸುರೇಶ ಎಂದು ಇರುತ್ತದೆ. ನನ್ನ ಹೋಟೆಲ್ ನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. 2022 ರಲ್ಲಿ ನಾನು ಹಣ್ಣಿನ ವ್ಯಾಪಾರ ಮಾಡುತ್ತಿದ್ದೆ. ಆರೋಪಿ ಮನೆ ಕೆಲಸಕ್ಕಾಗಿ ಸಾಲ ಪಡೆದಿರುತ್ತಾರೆ. ಸದರಿ ವ್ಯವಹಾರ ಸಂತೋಷ ರವರು ಕಾರು ಖರೀದಿ ಮಾಡುವ ಸಲುವಾಗಿ ಆಗಿರುತ್ತದೆ ಎಂದರೆ ಸಾಕ್ಷಿ ಸಂತೋಷ ಎಂದರೆ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಬಿ ಪಿ ಎಲ್ ಪಡಿತರ ಚೀಟಿ ಇದೆ.

ನನಗೆ ಎಸ್ ಬಿ ಐ ನಲ್ಲಿ ಖಾತೆ ಇರುತ್ತದೆ. ಆರೋಪಿ 2022 ರ ನವೆಂಬರ್ ತಿಂಗಳಲ್ಲಿ ಸಾಲ ಕೇಳಿರುತ್ತಾರೆ. ಸಾಲ ಕೇಳಲು ಆರೋಪಿ ಮತ್ತು ಅವರ ಗಂಡ ನಮ್ಮ ಅಂಗಡಿಯ ಬಳಿ ಬಂದಿರುತ್ತಾರೆ. ಸದರಿ ವಿಚಾರವನ್ನು ನನ್ನ ನೋಟೀಸ ಮತ್ತು ದೂರಿನಲ್ಲಿ ತಿಳಿಸಿರುತ್ತೇನೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಸಾಲ ನೀಡುವಾಗ ಬೇರೆ ಬರವಣಿಗೆ ಮಾಡಿಕೊಂಡಿರುವುದಿಲ್ಲ. ಸಾಲ ಕೇಳುವಾಗ ಸಂತೋಷ ರವರು ಇದ್ದಾರಾ ಎಂದರೆ ಅವರು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಫಾಸ್ಟ ಪುಡ್ ನ್ನು ಟೋಲ್ ಗೇಟ್ ಬಳಿ ಇಟ್ಟಿಕೊಂಡಿರುತ್ತೇನೆ. ನಾನು ಒಬ್ಬಳೇ ಕೆಲಸ ಮಾಡಿಕೊಂಡಿದ್ದು ಆಗಾಗೇ 2-3 ಜನ ಬಂದು ಸಹಾಯಕರಾಗಿ ಕೆಲಸ ಮಾಡಿ ಹೋಗುತ್ತಾರೆ. ಅವರ ಹೆಸರು ಗೊತ್ತಿಲ್ಲ. ಹಣ್ಣಿನ ವ್ಯಾಪಾರದಿಂದ ನಾನು ಹಣವನ್ನು ಹೊಂದಿಸಿಕೊಂಡಿದ್ದೆ. ಆರೋಪಿಗೆ 500 ಮತ್ತು 100 ಮುಖಬೆಲೆಯ ಹಣ ನೀಡಿರುತ್ತೇನೆ. ಆದರೆ ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿ 2 ತಿಂಗಳ ನಂತರ ಹಣ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು.

2 ತಿಂಗಳ ನಂತರ ಹಣ ವಾಪಸ್ಸು ಕೊಡಿ ಎಂದು ಕೇಳಿರುತ್ತೇನೆ. ಆರೋಪಿ ಹಣ್ಣು ಖರೀದಿ ಮಾಡಲು ನಮ್ಮ ಅಂಗಡಿಗೆ ಬರುತ್ತಿದ್ದರು ಆಗ ಕೇಳಿರುತ್ತೇನೆ. ಚೆಕ್ ನ್ನು ನಾನೇ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ಆರೋಪಿ ಚೆಕ್ ನ್ನು ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೆ ಕೇ ಸ ಇ**

ಸಹಿ/-

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**